# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 20 ಗಂಗಾನಗರ.ಬೆಂಗಳೂರು.**

ಸಂಖ್ಯೆ: ಸ.ಅ/ವಾ-20/ಪಿ.ಆರ್/೧೨ /2022-23 ದಿನಾಂಕ:-02-07-20222

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:-** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 02-07-2022 ರಂದು ವಾರ್ಡ್ ನಂ:20, 3ನೇ ಕ್ರಾಸ್, 108 ಬಸ್ ನಿಲ್ದಾಣದ ಹತ್ತಿರ ಹೆಚ್.ಎಂ.ಟಿ ಬಡಾವಣೆ ಗಂಗಾನಗರ, ಬೆಂಗಳೂರು ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಬಿ.ಎಸ್ ಪ್ರಹ್ಲಾದ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ.ಮೋಹನ್ ಕುಮಾರ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾಡ್ ನಂ: 20 |
| 3. | ಕಿಶೋರ್‌ಗೌಡ.ಎಸ್ ಪಾಟೀಲ್ | ಸಹಾಯಕ ಅಭಿಯಂತರರು (ಕಿಯಾನಿಕ್ಸ್), ವಾರ್ಡ್-20 |
| 4. | ಶ್ರೀ. ಕೃಷ್ಣಮೂರ್ತಿ ಬಿ.ಎಂ | ಕಿರಿಯ ಅಭಿಯಂತರರು (ಬೆಸ್ಕಾಂ) |
| 5. | ಶ್ರೀ. ಜಗದೀಶ್‌ಕುಮಾರ್ | ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ (ಸಂಚಾರ ವಿಭಾಗ) |
| 6. | ಶ್ರೀಮತಿ ಶಾಯಿದಾ | ಹಿರಿಯ ಆರೋಗ್ಯ ಪರಿವೀಕ್ಷಕರು |
| 7. | ಶ್ರೀ ಬಿಂಗಿ ಭೀಮಣ್ಣ | ಸಾರ್ವಜನಿಕರು |
| 8. | ಶ್ರೀ. ಶ್ರೀನಿವಾಸ್. | ಸಾರ್ವಜನಿಕರು |
| 9. | ಶ್ರೀ. ಎಂ.ಆರ್.ಪ್ರಸಾದ್ | ಸಾರ್ವಜನಿಕರು |
| 10. | ಶ್ರೀಮತಿ ವಿಜಯಾ ವಿ ಗೌಡ | ಸಾರ್ವಜನಿಕರು |
| 11. | ಶ್ರೀ. ಪಿ.ವಿ.ಜಗನ್ನಾಥ್ ರಾವ್ | ಸಾರ್ವಜನಿಕರು |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ.ಮೋಹನ್‌ಕುಮಾರ್ ರವರು ಸಭೆಗೆ ಹಾಜರಾಗಿದ್ದ ಸಾರ್ವಜನಿಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

1. ಭಿಂಗಿ ಭೀಮಣ್ಣರವರು ಅರಣ್ಯ ಇಲಾಖೆಯವರಿಗೆ ವಾರ್ಡ್‌ನಲ್ಲಿ ಖಾಲಿ ಇರುವ ಜಾಗದಲ್ಲಿ ಗಿಡ ನೆಡಲು ಮನವಿ ಮಾಡಿದರು.
2. 108 ಬಸ್ ನಿಲ್ದಾಣದ ಪಾದಚಾರಿ ಮಾರ್ಗದ ಮೇಲೆ ನಿಲುಗಡೆ ಮಾಡುವ ತಳ್ಳುವ ಗಾಡಿಗಳನ್ನು ಮತ್ತು ರಸ್ತೆ ಮೇಲೆ ಇರುವ ಗಾಡಿಗಳನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಮನವಿಯನ್ನು ಸಲ್ಲಿಸಿದರು.
3. ಬೀಂಗಿ ಬೀಮಣ್ಣನವರು ಮುಂದಿನ ವಾರ್ಡ್ ಸಮಿತಿ ಸಭೆಗೆ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗುಂತೆ ಮನವಿ ಸಲ್ಲಿಸಿದರು.
4. 108 ಬಸ್ ನಿಲ್ದಾಣದ ಮಾರ್ಗದಲ್ಲಿ ಬಿ.ಎಂ.ಟಿ.ಸಿ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸಿಕೊಡಲು ಸಾರ್ವಜನಿಕರು ಮನವಿಯನ್ನು ಸಲ್ಲಿಸಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

AE-20

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 20 ಗಂಗಾನಗರ

21/09/2022

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 20 ಗಂಗಾನಗರ